Regd No M 1299 Sri ಶಾ॥ 26—10—51

SATYAVADI = 35th Year

# ಮೈಸೂರಿನ ಸಮಿತಿಗೆ ಕೃಪಾಲಿನಿ

## ಎಚ್ಚರಿಕೆ

ಕಿಸಾನ್ ಮಜದೂರ್ ಪ್ರಜಾ ಪಕ್ಷ ತನ್ನ ವತಿಯಿಂದ ಉಮೇದುವಾರರನ್ನು ನಿಲ್ಲಿಸುವಾಗ ಅನು ವಿಷಯದಲ್ಲಿ ತೀವ್ರ ಎಚ್ಚರದಿಂದಿರಬೇಕೆಂದು ಆಚಾರ್ಯ ಕೃಪಾಲಿನಿ ಸೂಚಿಸಿ ಉಮೇದುವಾರರ ಪಟ್ಟಿಯನ್ನು ಕೇಂದ್ರಕ್ಕೆ ಕಳಿಸಲು ತಿಳಿಸಿದ್ದಾರೆ

× ಭಾರತ ಪಾಕಿಸ್ತಾನ್ ಸೌಹಾರ್ದಕ್ಕೆ ಹೊಸ ಪ್ರಯತ್ನವಾಗಲಿದೆ

ಸ್ಥಾಪಕರು- ಅರಮನೆ ಸಿರಸ್ತೆದಾರ್ ಎಂ. ವಿ. ಸುಬ್ರಾಯರು | ಬಿಡಿ ಪ್ರತಿ 3 ಪೈ

### ದಿವ್ಯವಾಣಿ

ಸುಳ್ಳು ಹೇಳುವವರು ತಮ್ಮ ಪಂಚದಿನ ಹೊಣೆಯನ್ನು ಮೊದಲು ಅರಿತುಕೊಂಡಿರುವುದಿಲ್ಲ — ಒಂದು ಸುಳ್ಳನ್ನು ದಕ್ಕಿಸಿಕೊಳ್ಳಲು ಮುಂದೆ ಹತ್ತು ಸುಳ್ಳುಗಳನ್ನು ಸೃಷ್ಟಿಸಬೇಕಾಗುತ್ತದೆ

— ಪೋಪ್

---

ಸಿಕಾರಿಪುರ ತಾಲ್ಲೂಕು ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀ ಜಿ ಹನುಮಂತರೆಡ್ಡಿಯವರು ಹೇಳಿಕೆಯಿತ್ತು ಶಿವಮೊಗ್ಗ ಬಿಲ್ಲಚನಾನಗರ ಪಟ್ಟಿ ತೃಪ್ತಿಕರವಿಲ್ಲವೆಂದು ತಿಳಿಸಿದ್ದಾರೆ

ಅಮೇರಿಕಾ ವಿದೇಶ ಇಲಾಖೆ ವಾಷಿಂಗ್ಟನ್ನಿನಲ್ಲಿ ಪ್ರಕಟಣೆಯಿತ್ತು, ಅಂಗ್ಲೋ-ಈಜಿಪ್ಷ್ ಒಪ್ಪಂದ ಸಾಧ್ಯವೆಂದಿದೆ

ಮಂಡ್ಯ ಪ್ರವಾಸವನ್ನು ಡಿಸೆಂಬರ್ ತಿಂಗಳಿನಲ್ಲಿ ಶ್ರೀಮನ್ಮಹಾರಾಜಂಯವರು ಕೈಗೊಳ್ಳುವ ವಾರ್ತೆ ಇದೆ

ಶ್ರೀ ಮಹದೇಶ್ವರಸ್ವಾಮಿ ಚಿಕ್ಕ ಜಾತ್ರೆಗೆ, ಕಾಲರಾ ಭಯವಿರುವದರಿಂದ ಯಾರೂ ಹೋಗಕೂಡದೆಂದು ಮೈಸೂರು ಸರ್ಕಾರ ಪ್ರಕಟಿಸಿದೆ

### ಅನ್ನ ಉಂಟು
### ಅರೆ ಹೊಟ್ಟೆ ಆದ್ರೂ ಉಂಟು !

ಮೈಸೂರು ಲೆಜಿಸ್ಲೆಟೀವ್ ಅಸೆಂಬ್ಲಿಯಲ್ಲಿ ಸಚಿವ ಶ್ರೀ ಟಿ ಮರಿಯಪ್ಪನವರು ಹೇಳಿಕೆಯಿತ್ತು, ಅರ್ಧ ಹೊಟ್ಟೆ ಅನ್ನವನ್ನಾದರೂ ಕೊಟ್ಟು ಜನರನ್ನು ಸಾಕುವೆವೇ ಏನಾ ಅನ್ನವಿಲ್ಲದೆ ಯಾರನ್ನೂ ಸಾಯುಗೊಡುವದಿಲ್ಲವೆಂದರು

### ಕೂಟ ಬಿಟ್ಟಿದ್ದರಂತೆ !

ಮಾಸ್ಕೋದಲ್ಲಿ ಭಾರತ ಚಲನಚಿತ್ರ ನಿಯೋಗದ ಗೌರವಾರ್ಥ ಭೋಜನ ಕೂಟ ಏರ್ಪಾಟಾಗಿತ್ತು. ರಷ್ಯದ ರಾಯಭಾರಿ ನೋವಿಕೋವ್ ಕೂಡ ಸಮಾರಂಭಕ್ಕೆ ಆಗಮಿಸಿದ್ದರು. ಶ್ರೀ ಎಸ್ ಎಸ್ ಕೃಷ್ಣ ತಮಿಳಿನಲ್ಲಿ ಮಾತನಾಡುತ್ತಿದ್ದಾಗ ಶ್ರೀ ಸುಬ್ರಹ್ಮಣ್ಯಂ ಭಾಷಣವನ್ನು ಇಂಗ್ಲೀಷಿಗೆ ತರ್ಜುಮೆ ಮಾಡುತ್ತಿದ್ದರು. ಇಂಗ್ಲೀಷ್ ಭಾಷಣವನ್ನು ರಷ್ಯ ಭಾಷೆಗೆ ರಷ್ಯ ರಾಯಭಾರಿಯವರು ಪರಿವರ್ತಿಸುತ್ತಿದ್ದರು. ಗಾಂಧಿ ತತ್ವ ಕಮ್ಯುನಿಸ್ಟ್ ತತ್ವಕ್ಕೆ ಏನೂ ದೊಡ್ಡದಲ್ಲವೆಂದು ಅವರು ಭಾಷಾಂತರ ಮಾಡಲು ನಿರಾಕರಿಸಿದರು. ಈ ಧೋರಣೆಯನ್ನು ಸಹಿಸದೆ ಕೃಷ್ಣ ಭೋಜನ ಕೂಟ ತ್ಯಾಗ ಮಾಡಿದರು. ಮಾರನೇ ದಿನ ರಷ್ಯ ಭಾಷಾಂತರಕಾರನು ಕೃಷ್ಣರವರ ಕ್ಷಮೆ ಬೇಡಿದನೆಂದು ದೆಹಲಿ ವಾರ್ತೆ.

### ವಿಧೇಯುಳಿರುವಳು !

ಪಿಲಾಂಗಿನ ಬಂದೀಖಾನೆಯಲ್ಲಿ 14 ವರ್ಷಗಳ ಕಾಲ ಸೆರೆಯಿದ್ದು ಸಂಸಾರಿಕ ಅಧ್ಯಸ್ಥಿಕೆಯಿಂದ ಜಡಗಡೆ ಹೊಂದಿದ ನಾಗಾರಾಣಿ ಭಾರತಕ್ಕೆ ತಾನು ವಿಧೇಯಳಾಗಿರುವದಾಗಿ ತಿಳಿಸಿರುವಳೆಂಬ ಕಲ್ಕತ್ತಾ ವಾರ್ತೆ.

---

ಹಳದಿ ವರ್ಣದ ಪಾಳೆ ನ್ಯೂಜಿಲೆಂಡಿನ ಇನ್ವರ್ ಕಾರ್ಗಿಲ್ ಎಂಬಲ್ಲಿ ಮೊನ್ನೆ ಬಿದ್ದ ಒಸರನ್ನು ಆಶ್ಚರ್ಯಗೊಳಿಸಿದೆ

---

ಭಾರತ ಪಾರ್ಲಿಮೆಂಟ್ ಅಂಗೀಕರಿಸಿದ ಪತ್ರಿಕಾ ವಿಧೇಯಕಕ್ಕೆ ಭಾರತದ ಅಧ್ಯಕ್ಷರು ರಾಜು ಹಾಕಿದರು.

ಈಗ ತುಟ್ಟಿಭತ್ಯವನ್ನು ಹೆಚ್ಚಿಸುವದಿಲ್ಲವೆಂದು ಮದರಾಸು ಸೆಕ್ರೆಟರಿಯೇಟ್ ನೌಕರಿಗೆ ಸರ್ಕಾರ ತಿಳಿಸಿದೆ

### ಹೊರಬಿದ್ದ ಆದಾಯ

ತಿರುವಾಂಕೂರು-ಕೊಚ್ಚಿನ್ ಸರ್ಕಾರವು ಸ್ವಯಂ ಆದಾಯ ಹೊಂಗೆಡುವಿದ್ದು ಈ ವರ್ಷಕ್ಕೆ ಅವರಿಗೆ ಅರ್ಧ ಕೋಟಿಗೇರಿದೆಯೆಂದು ಎರ್ನಾಕುಲಂ ವಾರ್ತೆ.

### ಭಂಗಾರ ಹಿಡಿದರು

ಸಂಕದ ಅಧಿಕಾರಿಗಳು 55 ಸಹಸ್ರ ರೂ ಬೆಲೆ ಬಾಳುವ ಭಂಗಾರದ ಗಟ್ಟಿಗಳನ್ನು ಮದರಾಸ್ ಕೇಂದ್ರ ರೈಲ್ವೆ ನಿಲ್ದಾಣದಲ್ಲಿ ಕಲ್ಕತ್ತಾಕ್ಕೆ ತೆರಳುತ್ತಿದ್ದ ಈರ್ವರಿಂದ ಮೊನ್ನೆ ವಶಮಾಡಿಕೊಳ್ಳಲಾಯಿತು

### ಉಕ್ಕಿನ ಹರದೆ ಇಲ್ಲ !

ರಷ್ಯದಲ್ಲಿ ಸ್ವಾಸಿಕರಿಗೆ ನಿರ್ಬಂಧ ವಿಲ್ಲವೆಂದೂ, ಉಕ್ಕಿನ ಪರದೆ ಅಲ್ಲಿಲ್ಲವೆಂದೂ ಶ್ರೀ ಎಸ್ ಎಸ್ ಕೃಷ್ಣ ತಿಳಿಸಿರುವದಾಗಿ ದೆಹಲಿ ವಾರ್ತೆ.

### ಆಯ್ಕೆ ಆರಂಭ

ನಿನ್ನೆ ದಿವಸ ಹಿಮಾಚಲ ಪ್ರದೇಶದಲ್ಲಿ ಮಹಾ ಚುನಾವಣೆ ಪ್ರಾರಂಭವಾದ ವಾರ್ತೆ ಸಿಂಲಾದಿಂದ ಬಂದಿದೆ

### ಗಾಂಧಿ ಸ್ಮಾರಕ ನಿಧಿ

ಭಾರತ ರಾಷ್ಟ್ರೀಯ ಮಜೂರ ಸಂಘ ಕಾಂಗ್ರೆಸ್ ಮಹಾತ್ಮ ಗಾಂಧಿಯವರ ಸ್ಮಾರಕಕ್ಕಾಗಿ ಹದಿನೈದು ಲಕ್ಷ ರೂ ಶೇಖರಿಸಿರುವದಾಗಿ ಅಹಮದಾಬಾದಿನ ವಾರ್ತೆ

### ಕಾಂಗ್ರೆಸಿಗೆ ರಾಜೀನಾಮೆಯೇ ?

ಮೈಸೂರು ಆರ್ಥಿಕ ಸಚಿವ ಶ್ರೀ ದಾಸಪ್ಪನವರ ಅಣ್ಣನವರ ಪುತ್ರ ಶ್ರೀ ಸಿ. ಜೆ ದೇವನಾಥ್ ಕಿಸಾನ್ ಮಜದೂರ್ ಪ್ರಜಾಪಕ್ಷಕ್ಕೆ ಸೇರುವ ಸಂಭವವಿದೆಯೆಂದು ತಿಳಿದುಬಂದಿದೆ.

### ಪರಿಶೀಲನೆ

ಮುಂದಿನ ಮಾಹೆ 3 ನೇ ತಾ॥ ಮೈಸೂರು ಲೆಜಿಸ್ಲೆಟೀವ್ ಅಸೆಂಬ್ಲಿ ಭಾರತ ಯೋಜನ ಸಮಿತಿ ಅನುಮತಿ ಪಡೆದು ತಯಾರಿಸಿರುವ 36. 6 ಕೋಟಿ ರೂಗಳ ಯೋಜನೆಯನ್ನು ಪರಿಶೀಲಿಸುವದು

### ನಂದ ಆಯ್ಕೆಯಾದರು

ಭಾರತ ಸರ್ಕಾರದ ಯೋಜನಾ ಸಚಿವ ಶ್ರೀ ನಂದ ಭಾರತ ಪಾರ್ಲಿಮೆಂಟಿಗೆ ಬೊಂಬಾಯಿನಿಂದ ಆರಿಸಿಬಂದರು

### ರಾಜು ಮೊಕದ್ದಮೆ

ಶ್ರೀ ಎಲ್ ಎಸ್ ರಾಜುರವರ ಮೇಲಿನ ಸೆಡಿಷನ್ ವಿಚಾರಣೆ ಮುಂದಿನ ಮಾಹೆ 26 ನೇ ತಾ॥ಗೆ ಮುಂದೂಡಲಾಯಿತೆಂದು ಬೆಂಗಳೂರು ವಾರ್ತೆ

### ಮಹಾ ಚುನಾವಣೆ

ಬ್ರಿಟನ್ನಿನಲ್ಲಿ ನಿನ್ನೆ ಮಹಾ ಚುನಾವಣೆ ಪ್ರಾರಂಭವಾಯಿತು

### ಅಸೆಂಬ್ಲಿ

ಬೆಂಗಳೂರಿನಲ್ಲಿ ಸಮಾವೇಶವಾಗಿರುವ ಮೈಸೂರು ಲೆಜಿಸ್ಲೆಟೀವ್ ಅಸೆಂಬ್ಲಿಯು ನಿನ್ನೆ ಶ್ರೀ ಎ ಭೀಮಪ್ಪನಾಯಕರವರು ಚಿತ್ರದುರ್ಗ ಜಿಲ್ಲೆಯನ್ನು ಕ್ಷಾಮಕ್ಷೇತ್ರವೆಂದು ಘೋಷಿಸಲು ನಿರ್ಣಯವೊಂದನ್ನು ಮಂಡಿಸಿದ್ದರು ಸಚಿವರಿತ್ತ ಸಮಾಧಾನದಿಂದ ಸಂತೃಪ್ತರಾಗಿ ಶ್ರೀಯುತರು ತಮ್ಮ ನಿರ್ಣಯವನ್ನು ವಾಪಸು ಪಡೆದರು

### ನವಾಬರಿಗೆ ಕೊಡಬೇಕಂತೆ

ಭಹವಾಲಿನ ನವಾಬರಿಗೆ ಪಾಕಿಸ್ತಾನ ಗವರ್ನರ್ ಜನರಲ್ ಗಿರಿ ಕೊಡಬೇಕೆಂದು ಪೂರ್ವ ಪಾಕಿಸ್ತಾನದ ಎರಡು ಮುಸ್ಲಿಂ ಸಂಸ್ಥೆಗಳು ಒತ್ತಾಯ ಮಾಡಿರುವದಾಗಿ ಡಾಕ್ಕಾ ವಾರ್ತೆ

## ಗೋಡೆ ಉರುಳಿ ಅಪಾಯ

ಒಡೆಯಲಾಗುತ್ತಿರುವ ಲ್ಯಾನ್ಸ್ ಡೌನ್ ಬಿಲ್ಡಿಂಗ್ಸಿನ ಗೋಡೆ ಉರುಳಿ ಮಗುವೊಂದು ತೀವ್ರಾಪಾಯಕ್ಕೆ ಒಳಗಾಗಿದೆಯೆಂದು ವಂದಿಯಾಗಿದೆ

## ಸರ್ಕಾರಿ ಪ್ರಕಟಣೆ

ಬೆಂಗಳೂರು ಕಾರ್ಪೊರೇಷನ್ ಪ್ರದೇಶದಲ್ಲಿ 7 ಆಹಾರ ಅಪರಾಧಗಳು, ಮೈಸೂರು ನಗರ ಪ್ರದೇಶದಲ್ಲಿ 6 ಆಹಾರ ಅಪರಾಧಗಳೂ – ಇದೇ ಸೆಪ್ಟೆಂಬರ್ 30 ನೇ ತಾರೀಖಿಗೆ ತೀರಿದ ಹದಿನೈದು ದಿವಸಗಳಲ್ಲಿ ಜರುಗಿದೆಯೆಂದು ಸರ್ಕಾರಿ ಪ್ರಕಟಣೆ ತಿಳಿಸುತ್ತದೆ

ನವೆಂಬರ್ 5 ನೇ ತಾ|| ಮೈಸೂರು ಸಂಸ್ಥಾನಾದ್ಯಂತ ಮುಕ್ಕಳ ದಿನಾಚರಣೆ ನಡೆಸುವ ಕುರಿತು ಸರ್ಕಾರಿ ಪ್ರಕಟಣೆ ಹೊರಟಿದೆ.

## ರೇಷ್ಮೆ ಕಾರ್ಡುದಾರ ಸಂಘದ ನಿರ್ಣಯ

ಮೈಸೂರು ನಗರದ ಆಹಾರ ಸಮಿತಿಯಲ್ಲಿ ಕಳೆದ ಶಾರಿಯಂತೆ ಈ ಸಾರಿಯೂ ಸಂಘಕ್ಕೆ ಪ್ರಾತಿನಿಧ್ಯವನ್ನು ಕೊಡಬೇಕೆಂದು ಸರ್ಕಾರವನ್ನು ಈ ಸಭೆ ಒತ್ತಾಯಿಸುತ್ತದೆ – ಎಂಬ ನಿರ್ಣಯ ಇತ್ತೀಚಿಗೆ ಸೇರಿದ್ದ ಮೈಸೂರು ನಗರದ ರೇಷ್ಮೆದಾರರ ಸಂಘದ ಕಾರ್ಯಕಾರಿ ಸಮಿತಿಯಲ್ಲಿ ಅಂಗೀಕೃತವಾಗಿದೆ.


ಗೋ ಸಂರಕ್ಷಣೆ ಮಾಡಿ

**Protect the Cow**

— ಜಯಪ್ರದ 5 ನೇ ವಾರ —

ಚಾಮುಂಡೇಶ್ವರಿ ಟಾಕೀಸಿನಲ್ಲಿ

ಸುಖಸಂಪತ್ ಚಿತ್ರಪಥದವರ ಸುಂದರ ಪೌರಾಣಿಕ ಚಿತ್ರ

ತಿಲೋತ್ತಮೆ (ಕನ್ನಡ)

ಭೂಮಿಕೆ— ಜಯಶ್ರೀ, ಜಿ. ಅಂ. ಸ್ಯಾಂಡೋ, ಕಲಾವಿಕಾರದ ಕೊಟ್ಟಾರಪ್ಪ

ಪ್ರತಿ ದಿನ 3 ಆಟಗಳು

— SUKH SAMPATH CHITRAPAT Release

ಐ. ಟಿ. ಎಲ್. ಗ್ರೈಪ್ ಪಿರಪ್



ನಿಮ್ಮ ಮುದ್ದು ಕಂದನ
ಅಜೀರ್ಣ ವ್ಯಾಧಿಗಳನ್ನು ತಡೆದು
ಆರೋಗ್ಯ ಕಾಪಾಡುವ ಅಮೃತಪಾನ

— ತಯಾರಕರು —

ದಿ ಮೈಸೂರು ಇಂಡಸ್ಟ್ರಿಯಲ್
ಅಂಡ್ ಟೆಸ್ಟಿಂಗ್ ಲ್ಯಾಬೊರೇಟರಿ
ಲಿಮಿಟೆಡ್

ಮಲ್ಲೇಶ್ವರಂ ಪೋಸ್ಟ್, ಬೆಂಗಳೂರು 3

ಶ್ರೇಷ್ಠತೆಯ ಹೆಗ್ಗುರುತು

ಐ.ಟಿ.ಎಲ್ ಗ್ರೈಪ್ ಪಿರಪ್



Edited, Printed and Published by Dharma Prachara Nirata M. S. Krishna Rao, at the Satyavadi Press Chamarajapuram Mysore



ಉಡ್‌ಲ್ಯಾಂಡ್ಸ್ 26–10–51 ರಿಂದ

**Neki Aur Badi** ನೇಕಿ ಔರ್ ಬದಿ

ಮಧುಬಾಲ, ಗೀತಾಬಾಲಿ, ಕಿದಾರನಾಥ್, ಕಕ್ಕೂ ಪಾತ್ರವಹಿಸಿರುವ

ಸುಮನೋಹರ ಹಿಂದಿ ಚಿತ್ರ ] [ ಪ್ರತಿ ದಿನ 3 ಪ್ರದರ್ಶನಗಳು

ಅಪೇರ— ಕೀರ್ತಿಯುತ 5 ನೇ ವಾರ

ನಿರ್ವಾಧಿಕಾರಿ

ಪಾತ್ರ — ಅಂಜಲಿದೇವಿ, ನಾಗಯ್ಯ, ರಾಮಚಂದ್ರ್, ಸಂಬಿಯಾರ್

ಮನೋಜ್ಞತ ತಮಿಳು ಚಿತ್ರ ಪ್ರತಿ ದಿನ 3 ಆಟಗಳು

ಬೆಳಗಿನ ಪ್ರದರ್ಶನ 26-10-51 ರಿಂದ .... ಜಗೀದಾರ್

ರಣಜಿತ್ 26–10–51 ರಿಂದ

ಮನಮೋಹನ ಹಿಂದಿ ಚಿತ್ರ ಪ್ರತಿ ದಿನ 3 ಆಟಗಳು

ನೌಜವಾನ್ **Naujavn**

ಪಾತ್ರ— ನಳಿನಿ ಜಯವಂತ್, ಪ್ರೇಮನಾಥ್

ಬೆಳಗಿನ ಪ್ರದರ್ಶನ 26–10–51 ರಿಂದ — — ದಿಲ್ ಕಿ ದುನಿಯಾ

ಸತ್ಯವಾದಿ

ದಿನಪತ್ರಿಕೆ ತಿಂಗಳಿಗೆ 6 ಆಣೆಗಳು

ಸತ್ಯವಾದಿ ಸೋಮವಾರ ಸಂಚಿಕೆ

ಶ್ರೀ ದ್ವಾರಕಾ ಜಗದ್ಗುರುಗಳವರ

ಉದಾರಾಶ್ರಯದಲ್ಲಿ ಪ್ರಕಟವಾಗುವ

– ಪ್ರಬೋಧ –

ಧಾರ್ಮಿಕ ಸಪ್ತಾಹಿಕವನ್ನೊಳಗೊಂಡಿದೆ

ವಾರ್ಷಿಕ ಚಂದಾ

ಅಂಚೆಯೆಚ್ಚ ಸಮೇತ 1–14–0

For Quality Printing

**L. N. Press**

Sivarampet, Mysore

ಶಕ್ತಿಸುಧಾ

— ಉತ್ತಮವಾದ ಟಾನಿಕ್ —

**For All Your**
**Headaches, Eye Troubles and Defective Sight**

consult— THE EYE – SIGHT INSTITUTE
1430 / 1 Post Office Road,
Krishnamurthipuram, Mysore

**SHAKTI SUDHA**

**A Superb Tonic**